ವಿಷಯ: ಮೈಸೂರು ನಗರದಲ್ಲಿ ಮಹಿಳಾ ಸರ್ಕಾರಿ ಐಟಿಐ ಸ್ಥಾಪನೆ.

1187 (1684)

ಶ್ರೀ ಇ.ಮಾರುತಿರಾವ್ ಪವಾರ್ (ನರಸಿಂಹರಾಜ): ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

ಅ) ಮೈಸೂರು ನಗರದಲ್ಲಿ ಸ್ವಯಂ ಉದ್ಯೋಗ ಚಟುವಟಿಕೆ ಕೈಗೊಳ್ಳಲು ಮಹಿಳಾ ವಿದ್ಯಾರ್ಥಿಗಳಿಗೆ ಮಹಿಳಾ ಸರ್ಕಾರಿ ಐ.ಟಿ.ಐ ಹೆಚ್ಚು (ಅಗತ್ಯ) ಅವಶ್ಯಕವಾಗಿದ್ದು, ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, 1998-99ನೇ ಸಾಲಿನಲ್ಲಿ ಮಹಿಳಾ ಸರ್ಕಾರಿ ಐ.ಟಿ.ಐ ಪ್ರಾರಂಭಿಸುವಲ್ಲಿ ಸರ್ಕಾರ ತೆಗೆದುಕೊಂಡ ಕ್ರಮವೇನು?

ಶ್ರೀ ಬಿ.ಸತ್ಯನಾರಾಯಣ (ಕಾರ್ಮಿಕ ರಾಜ್ಯ ಸಚಿವರು):

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ. ಮಹಿಳೆಯರಿಗೆ ಮೀಸಲಾತಿ ಇರುವುದರಿಂದ ಮತ್ತು ಆಯ್ಕೆಯನ್ನು ಅರ್ಹತೆ ಆಧಾರ ಮೇಲೆ ಮಾಡುವುದರಿಂದ ಪ್ರತ್ಯೇಕ ಐಟಿಐ ತೆರೆಯುವ ಅವಶ್ಯಕತೆ ಇರುವುದಿಲ್ಲ.

ವಿಷಯ: ಕೊಡಗು ಕೇರಳ ಗಡಿ ಪ್ರದೇಶಗಳಲ್ಲಿ ಅರಣ್ಯ ರಕ್ಷಣೆ.

1188 (1683)

ಶ್ರೀ ಡಿ.ಎಸ್.ಮಾದಪ್ಪ (ಮಡಿಕೇರಿ): ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

ಅ) ಕೊಡಗು ಕೇರಳ ಗಡಿ ಪ್ರದೇಶವಾದ ಮಾಕುಟ್ಟ (ಮಾಂಟೆ)ಯಲ್ಲಿ ಅರಣ್ಯ ಚೋರರ ದಾಳಿಗೆ ಅರಣ್ಯ ಸಿಬ್ಬಂದಿಯೋರ್ವ ಬಲಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಸರ್ಕಾರದ ಈ ಬಗ್ಗೆ ನಡೆಸಿರುವ ತನಿಖಾ ಕ್ರಮವೇನು?

ಇ) ಗಡಿ ಪ್ರದೇಶದ ಅರಣ್ಯ ರಕ್ಷಣೆಯ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ಡಿ.ಮಂಜುನಾಥ್ (ಅರಣ್ಯ ಸಚಿವರು):

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಗಡಿ ಪ್ರದೇಶದಲ್ಲಿ ಮೀಸಲು ಪೋಲೀಸ್ ಪಡೆಯ ತುಕಡಿಗಳನ್ನು ನಿಯೋಜಿಸಿ ವ್ಯಾಪಕ ಗಸ್ತು ನಡೆಸಲಾಗುತ್ತಿದೆ. ಗಡಿ ಸಿಬ್ಬಂದಿಗೆ ಶಸ್ತ್ರಾಸ್ತ್ರಗಳನ್ನು ಹಾಗೂ ನಿಸ್ತಂತು ಉಪಕರಣಗಳನ್ನು ಒದಗಿಸಲಾಗಿದೆ. ಗಡಿ ಪ್ರದೇಶದಲ್ಲಿ ತನಿಖಾ ಠಾಣೆಯನ್ನು ಸ್ಥಾಪಿಸಲಾಗಿದೆ.

ವಿಷಯ: ಪಶುಸಂಗೋಪನೆಯಲ್ಲಿ ವಿಮಾ ಸೌಲಭ್ಯ.

1189 (1663)

ಶ್ರೀ ಎಸ್.ಪಿ.ಮುದ್ದಹನುಮೇಗೌಡ (ಕುಣಿಗಲ್): ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

ಅ) ಪಶುಸಂಗೋಪನೆಯಲ್ಲಿ ವಿಮಾ ಸೌಲಭ್ಯ ಪಡೆಯುತ್ತಿರುವ ರೈತರ ಶೇಕಡಾವಾರು ಸಂಖ್ಯೆ ಎಷ್ಟು?

ಆ) ವಿಮಾ ಸೌಲಭ್ಯದ ಬಗ್ಗೆ ಹೆಚ್ಚಿನ ತಿಳುವಳಿಕೆ ಮತ್ತು ಮಾಹಿತಿಗೆ ಇಲಾಖೆಯು ಹಮ್ಮಿಕೊಂಡಿರುವ ಕ್ರಮಗಳೇನು?

ಶ್ರೀ ಬಿ.ಬಿ.ನಿಂಗಯ್ಯ (ಪಶುಸಂಗೋಪನಾ ರಾಜ್ಯ ಸಚಿವರು):

ಅ) ಸರ್ಕಾರದ ವತಿಯಿಂದ ಅನುಷ್ಠಾನಗೊಳಿಸಲಾಗುತ್ತಿರುವ ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ, ವಿಶೇಷ ಜಾನುವಾರು ತಳಿ ಅಭಿವೃದ್ಧಿ ಯೋಜನೆ, ವಿಶೇಷ ಘಟಕ ಯೋಜನೆ, ಗಿರಿಜನ ಅಭಿವೃದ್ಧಿ ಯೋಜನೆ ಹಾಗೂ ಜಲಾನಯನ ಅಭಿವೃದ್ಧಿ ಯೋಜನೆಗಳಲ್ಲಿ ಜಾನುವಾರು ಸ್ವತ್ತುಗಳನ್ನು ನೀಡುವಲ್ಲಿ ಮಾರುಕಟ್ಟೆಯ ಬೆಲೆಯಲ್ಲಿ ಶೇಕಡ 2.25ರಂತೆ ಪ್ರೀಮಿಯಂ ದರದಲ್ಲಿ ನೂರಕ್ಕೆ ನೂರರಷ್ಟು ರೈತರು ವಿಮಾ ಸೌಲಭ್ಯ ಪಡೆಯುತ್ತಿದ್ದಾರೆ. ಖಾಸಗಿಯಾಗಿ ತಮ್ಮ ಜಾನುವಾರುಗಳಿಗೆ, ಸಂಘಟಿತ ಕುಕ್ಕುಟ ಪಾಲಕರು ವಿಮೆ ಸೌಲಭ್ಯ ಪಡೆಯಲು ರೈತರು ಶೇಕಡ 5ರಿಂದ 10ರಷ್ಟಿದ್ದಾರೆ.

ಆ) ಇಲಾಖೆಯಲ್ಲಿ ತಾಲ್ಲೂಕಿನಲ್ಲಿ ಕೆಲಸ ಮಾಡುವ ವಿಸ್ತರಣಾಧಿಕಾರಿಗಳು ಹಾಗೂ ಪಶುವೈದ್ಯರು ಆಗಿಂದಾಗ್ಗೆ ಗ್ರಾಮಗಳಲ್ಲಿ ಏರ್ಪಡಿಸುವ ಜಾನುವಾರು ರೋಗಗಳ ತಪಾಸಣಾ ಶಿಬಿರ, ಲಸಿಕೆ ಹಾಕುವ ಸಂದರ್ಭಗಳಲ್ಲಿ ವಿಮಾ ಸೌಲಭ್ಯದ ದೊಡ್ಡ ಜಾತ್ರೆಗಳಲ್ಲಿ ಗ್ರಾಮ ಸಭೆಗಳಲ್ಲಿ ಗ್ರಾಮೀಣ ಪ್ರಚಾರ ವಾಹನದ ಮೂಲಕ ವಿಮಾ ಇಲಾಖೆಯ ಅಧಿಕಾರಿಗಳೊಂದಿಗೆ ಕಾರ್ಯಾಗಾರ ಏರ್ಪಡಿಸಿ ತಿಳುವಳಿಕೆ ನೀಡುವರು